**ಸಾಕ್ಷಿಯನ್ನು ದಿಃ 16.12.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಸಹಿ ಮಾಡಲು ಬರುತ್ತದೆ. ನನ್ನ ಗಂಡನ ಊರು ಹುಣಸೂರು ತಾಲ್ಲೂಕಿನ ಮೂಕನಹಳ್ಳಿ ಗ್ರಾಮ ಆಗಿರುತ್ತದೆ. ನನ್ನ ಮದುವೆಯಾಗಿ ಅಂದಾಜು 50 ವರ್ಷ ಆಗಿರುತ್ತದೆ. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆ ತಾಯಿ ತೀರಿಹೋಗಿದ್ದರು. ನನ್ನ ಅಣ್ಣಂದಿರು ಮದುವೆಯ ಖರ್ಚು ವೆಚ್ಚವನ್ನು ಭರಿಸಿ ನನ್ನ ಮದುವೆ ಮಾಡಿರುತ್ತಾರೆ ಎಂದರೆ ಸರಿ. ಮದುವೆಯಾದ ನಂತರ ನನ್ನ ಅಣ್ಣಂದಿರ ಮನೆಗೆ ನಾನು ಬಂದು ಹೋಗುತ್ತಿದ್ದೆ. ಆಗ ನನ್ನ ಅಣ್ಣಂದಿರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಜಮೀನು ಕೊಡಿ ಎಂದು ಕೋರಿ ಈ ದಾವೆಯನ್ನು ಹೂಡಿರುತ್ತೇನೆ. ನನ್ನ ತಂದೆ ತಾಯಿಗೆ ಒಟ್ಟು ಆರು ಜನ ಮಕ್ಕಳು ಅದರಲ್ಲಿ ಮೂರು ಜನ ಹೆಣ್ಣು ಮಕ್ಕಳು, ಮೂರು ಜನ ಗಂಡು ಮಕ್ಕಳು. ಸದರಿಯವರ ಹೆಸರು ಏಲಕ್ಕಯ್ಯ, ಸಣ್ಣಹುಚ್ಚಮ್ಮ, ಚಿಕ್ಕಚೆಲುವ, ಚೆಲುವಿ, ನಾನು ಮತ್ತು ಸ್ವಾಮಿ ಇರುತ್ತದೆ. ಈ ಸಂಬಂಧವಾಗಿ ವಂಶವೃಕ್ಷವನ್ನು ಹಾಜರು ಪಡಿಸಿರುತ್ತೇನೆ. ವಂಶವೃಕ್ಷವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೂರು ವರ್ಷದವಳಿದ್ದಾಗ ನನ್ನ ತಂದೆ ತೀರಿಹೋಗಿರುತ್ತಾರೆ. 15 ವರ್ಷದವಳಿದ್ದಾಗ ನನ್ನ ತಾಯಿ ತೀರಿಹೋಗಿರುತ್ತಾರೆ. ದಾವ ಆಸ್ತಿಯು ನನ್ನ ತಾತನವರಿಗೆ ಕುಲುವಾಡಿಕೆಯಿಂದ ಬಂದಿರುತ್ತದೆ ಆನಂತರ ನನ್ನ ತಂದೆಯವರಿಗೆ ಬಂದಿರುತ್ತದೆ. ಯಾವ ವರ್ಷದಲ್ಲಿ ನನ್ನ ತಾತನವರಿಗೆ ಸದರಿ ಜಮೀನು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರಿಗೆ 9 ಎಕರೆ ಜಮೀನು ಬಂದಿರುತ್ತದೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ನನ್ನ ತಂದೆಯವರ ಹೆಸರಿಗೆ ಬಂದ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಮೂರು ಜನ ಅಣ್ಣತಮ್ಮಂದಿರ ವಿರುದ್ಧ ದಾವೆ ಹೂಡಿರುತ್ತೇನೆ . ಮೂರು ಜಮೀನಿನಲ್ಲಿ ಪಾಲು ಬೇಕು ಎಂದು ದಾವೆ ಹೂಡಿರುತ್ತೇನೆ. ಸರ್ವೇ ನಂ. 80 ರಲ್ಲಿ 2 ಎಕರೆ 7 ಗುಂಟೆ, ಇದೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 78 ರಲ್ಲಿ 1 ಎಕರೆ 38 ಗುಂಟೆ ಇದೆ ಎಂದರೆ ಸರಿ. ಸರ್ವೇ ನಂ. 217 ರಲ್ಲಿ 2 ಎಕರೆ 25 ಗುಂಟೆ ಇದೆ ಎಂದರೆ ಸರಿ. ಒಟ್ಟು ಮೂರು ಜಮೀನಿಂದ 5 ಎಕರೆ 32

ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂ. 80 ರ ಜಮೀನಿನ ಪೂರ್ವಕ್ಕೆಃ ಮಾಸ್ತೇಗೌಡರ ಜಮೀನು, ಪಶ್ಚಿಮಕ್ಕೆಃ ಪಟೇಲರ ಹೊಲ, ಉತ್ತರಕ್ಕೆಃ ನನ್ನ ಜಮೀನು ಹಾಗೂ ದಕ್ಷಿಣಕ್ಕೆಃ ನಮ್ಮ ಜಮೀನು ಇದೆ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 78 ರ ಜಮೀನಿನ ಪಶ್ಚಿಮಕ್ಕೆಃ ಏಲಕ್ಕೆಯ ನ ಜಮೀನು, ಪೂರ್ವಕ್ಕೆಃ ಮಾಸ್ತೀಗೌಡರ ಜಮೀನು, ಉತ್ತರಕ್ಕೆಃ ಮುದ್ದೇಗೌಡರ ಜಮೀನು ಹಾಗೂ ದಕ್ಷಿಣಕ್ಕೆ ನಮ್ಮ ಹೊಲ ಇದೆ. ಸರ್ವೇ ನಂ. 217 ರ ಜಮೀನಿನ ಉತ್ತರಕ್ಕೆಃ ಕೆಂಪೇಗೌಡರ ಹೊಲ, ಪೂರ್ವ ಮತ್ತು ದಕ್ಷಿಣಕ್ಕೆಃ ಮಾಸ್ತೀಗೌಡ ಮತ್ತು ಪಶ್ಚಿಮಕ್ಕೆಃ ಏಲಕ್ಕಯ್ಯ ರ ಹೊಲ ಇದೆ. ನಾವು ಆರು ಜನ ಮಕ್ಕಳಲ್ಲಿ ಐದು ಜನ ತೀರಿಹೋಗಿದ್ದು ನಾನೊಬ್ಬಳೇ ಇದ್ದೇನೆ ಎಂದರೆ ಸರಿ. ಸರ್ವೇ ನಂ. 78 ರಲ್ಲಿ 1 ಎಕರೆ 38 ಗುಂಟೆಗೆ ಸ್ವಾಮಿ ಇವರ ಹೆಸರಿಗೆ 1995-96 ರಲ್ಲಿ ಖಾತೆ ಆಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಮುಂದುವರೆದು ಸಾಕ್ಷಿಯು ನನಗೆ ಕಳುಹಿಸಿದ ನಂತರ ಅವರು ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.